**ದಿನಾಂಕ: 21-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಪ್ರತಿವಾದಿ ಪರ ಶ್ರೀ ಸಿ ಎಸ್ ಎಸ್ **ವಕೀಲರಿಂದ**

ಸೈಟ್ ನಂ.137 ರ ಪೂರ್ವ ದಿಕ್ಕಿಗೆ ನಿವೇಶನಗಳು ಇರುತ್ತವೆ. ಪಶ್ಚಿಮ ದಿಕ್ಕಿಗೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ಸೈಟ್ ನಂ.137 ನ್ನು ಸಾವಿತ್ರಮ್ಮನವರಿಂದ ಖರೀದಿ ಮಾಡಿರುತ್ತೇನೆ. ಸಾವಿತ್ರಮ್ಮನವರಿಗೆ ಸದರಿ ಆಸ್ತಿಯು ಪಂಚಾಯಿತಿಯಿಂದ ಬಂದಿರುತ್ತದೆ. ಕ್ರಯಪತ್ರ ನ್ಯಾಯಾಲಯಕ್ಕೆ ನೀಡಿರುತ್ತೇನೆ. ನನ್ನ ಕ್ರಯಪತ್ರದಲ್ಲಿ ಸದರಿ ವಿಚಾರವನ್ನು ನಮೂದು ಮಾಡಿರುತ್ತೇನೆ. ಸೈಟ್ ನಂ.137 ರ ಉತ್ತರ ದಿಕ್ಕಿಗೆ ಯೋಗಿಶಪ್ಪನವರ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಪಶ್ಚಿಮ ದಿಕ್ಕಿಗೆ ಸೈಟ್ ನಂ.138 ಎಂದು ನಮೂದು ಇದೆ ಎಂದರೆ ಸಾಕ್ಷಿ ಅದು ಸರಿ ಇರುವುದಿಲ್ಲ, ಅಲ್ಲಿ ರಸ್ತೆ ಬರುತ್ತದೆ ಎಂದು ನುಡಿದಿರುತ್ತಾರೆ. ಕ್ರಯಪತ್ರದಲ್ಲಿ ಪಶ್ಚಿಮ ದಿಕ್ಕಿಗೆ ಸೈಟ್ ನಂ.138 ಎಂದು ನಮೂದು ಇದೆ ಎಂದರೆ ಸರಿ.

ನೀವು ಸಲ್ಲಿಸಿದ್ದ ಅಸಲು ದಾವ ಸಂಖ್ಯೆ 74/2014 ರಲ್ಲಿ ಸೈಟ್‌ನಂ. 137 ರ ಪಶ್ಚಿಮದಿಕ್ಕಿಗೆ ಸೈಟ್ ನಂ.138 ಎಂದು ನಮೂದು ಮಾಡಿರುತ್ತಿರಾ ಎಂದರೆ ಸರಿ. ಅಸಲು ದಾವೆ ಸಂಖ್ಯೆ 74/2014 ರಲ್ಲಿ ನಮೂದು ಮಾಡಿರುವ ಆಸ್ತಿ ಹಾಗೂ ಪ್ರಸ್ತುತ ದಾವೆಯಲ್ಲಿ ನಮೂದು ಮಾಡಿರುವ ದಾವ ಆಸ್ತಿ ಎರಡೂ ಒಂದೇ ಅಗಿರುತ್ತದೆ. ನಿಪಿ-1 ಮತ್ತು 2 ಬೇರೆ ಬೇರೆ ನಿವೇಶನಗಳ ಅಸಸ್ ಮೆಂಟ್ ಕಾಪಿ ಆಗಿರುತ್ತದೆ. ನಿಪಿ-1 ಮತ್ತು 2 ಅಸಸ್ ಮೆಂಟ್ ನಲ್ಲಿ ಸೈಟ್ ನಂ.137 ರ ದಕ್ಷಿಣ ದಿಕ್ಕನ್ನು ಹೊರತು ಪಡಿಸಿ ಬೇರೆ ಎಲ್ಲಾ ದಿಕ್ಕುಗಳಲ್ಲಿ ನಿವೇಶನ ಹಾಗೂ ಮನೆಗಳು ಇವೆ ಎಂದು ನಮೂದು ಇದೆ ಎಂದರೆ ಸಾಕ್ಷಿ ನಿವೇಶನಗಳು ಎಂದು ನಮೂದು ಇದೆ ಎಂದು ನುಡಿದಿರುತ್ತಾರೆ. ಸೈಟ್ 135 ರಿಂದ 138 ರವರೆಗೂ ನಿವೇಶನಗಳು ಒಂದೇ ದಾರಿಯಲ್ಲಿ ಬರುತ್ತದೆ ಎಂದರೆ ಸಾಕ್ಷಿ 135 ರಿಂದ 137 ರವರೆಗೂ ಬರುತ್ತದೆ 138 ಇರುವುದಿಲ್ಲ ಎಂದು ನುಡಿದಿರುತ್ತಾರೆ. ಪಂಚಾಯಿತಿಯವರು ಅಸಸ್ ಮೆಂಟ್

ಬರೆಯುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅಸಸ್ ಮೆಂಟ್ ನಲ್ಲಿ ಅನುಭವದಾರರು, ಚೆಕ್ಕುಬಂಧಿ, ವಿಸ್ತೀರ್ಣ ನಮೂದು ಇರುತ್ತದೆ ಎಂದರೆ ಸರಿ. 135 ಅಸಸ್ ಮೆಂಟ್ ನಂಬರ್ ಪೂರ್ವ ದಿಕ್ಕಿಗೆ ಇದ್ದು, ಅದರ ಪಶ್ಚಿಮ ದಿಕ್ಕಿಗೆ 136 ಇದ್ದು, ಅದರ ಪಶ್ಚಿಮ ದಿಕ್ಕಿಗೆ 137 ಅಸಸ್ ಮೆಂಟ್ ನಂಬರ್ ಇರುತ್ತದೆ ಎಂದರೆ ಸರಿ. ಇವುಗಳ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ಇವುಗಳ ಉತ್ತರ ದಿಕ್ಕಿಗೂ ಸಹ ಬೇರೆಯವರ ನಿವೇಶನಗಳು ಇವೆ ಎಂದರೆ ಸರಿ. 137 ಅಸಸ್ ಮೆಂಟ್ ನಂಬರ್ ಜಾಗವನ್ನು ನಾನು ಅಳತೆ ಮಾಡಿಸಿರುತ್ತೇನೆ. ಪಂಚಾಯಿತಿಯವರು ಅಳತೆ ಮಾಡಿರುವ ಬಗ್ಗೆ ದಾಖಲಾತಿಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. 137 ರ ಪಶ್ಚಿಮಕ್ಕೆ 138 ಅಸಸ್ ಮೆಂಟ್ ಇದೆ ಎಂದರೆ ಸರಿಯಲ್ಲ. 138 ರ ಪಶ್ಚಿಮಕ್ಕೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ರಂಗನಾಥ್ ಅಸಸ್ ಮೆಂಟ್ ನಂ.138 ರಲ್ಲಿ ವಾಸವಾಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬಾಡಿಗೆಗೆ ನೀಡಿರುತ್ತಾರೆಂದು ನುಡಿದಿರುತ್ತಾರೆ. ಕಾರ್ಮಿಕರು ಅದರಲ್ಲಿ ವಾಸವಾಗಿರುತ್ತಾರೆ. ನಿಪಿ-3 ರ 1 ನೇ ಕಾಲಂ ನಲ್ಲಿ ಇರುವಂತಹ ನಂಬರ್ ಸಿರಿಯಲ್ ನಂಬರ್ ಎಂದರೆ ಸರಿ.

2 ನೇ ಕಾಲಂನಲ್ಲಿ ಇರುವಂತಹದ್ದು ಅಸಸ್ ಮೆಂಟ್ ನಂಬರ್ ಎಂದರೆ ಸರಿ. ಅದರಲ್ಲಿ ನಮೂದು ಇರುವ ಅಸಸ್ ಮೆಂಟ್ ನಂಬರ್ ಗಳು ಒಂದೇ ದಾರಿಯಲ್ಲಿ ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದರಲ್ಲಿ ಬಿಳಿ ಬಣ್ಣ ಇರುವ ಸಿಮೆಂಟ್ ಶೀಟಿನ ಮನೆ ಪ್ರತಿವಾದಿ ಬಾಡಿಗೆಗೆ ನೀಡಿರುವ ಮನೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ಛಾಯಚಿತ್ರದಲ್ಲಿ ಕಾಣಿಸುತ್ತಿರುವ ಮನೆ 137 ಅಸಸ್ ಮೆಂಟ್ ಆಗಿರುತ್ತದೆ ಅದು ನನ್ನ ಜಾಗ ಆಗಿರುತ್ತದೆ, ಅದರಲ್ಲಿ ಮನೆ ಕಟ್ಟಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಛಾಯಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದರಲ್ಲಿ ಕಾಣಿಸುತ್ತಿರುವ ಸನ್ ರೈಸ್ ಕಲ್ಲರ್ ಮನೆಯ ಜಾಗವು

ಓಃಎಸ್ಃನಂ.206/2021

ಪಿ.ಡಬ್ಲ್ಯೂ- 1

ಪ್ರತಿವಾದಿಗೆ ಸೇರಿದ್ದು ಎಂದರೆ ಸಾಕ್ಷಿ ಅದು ನನಗೆ ಸೇರಿದ ಜಾಗ ಆಗಿರುತ್ತದೆ, ಪ್ರತಿವಾದಿಗಳು ಅದನ್ನು ಕಾರ್ಮಿಕರಿಗೆ ಬಾಡಿಗೆಗೆ ನೀಡಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಛಾಯಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ಛಾಯಚಿತ್ರದಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ಪ್ರತಿವಾದಿ ಹಾಗೂ ಅವರ ಹೆಂಡತಿ ಎಂದರೆ ಸರಿ. ನಿಡಿ-1 ರಲ್ಲಿ ಕಾಣಿಸುತ್ತಿರುವ ಟಾರು ರಸ್ತೆ ಪಶ್ಚಿಮದ ಕಡೆ ಇರುತ್ತದೆ ಎಂದರೆ ಸರಿ, ಮಣ್ಣಿನ ರಸ್ತೆ ದಕ್ಷಿಣದ ಕಡೆ ಇರುತ್ತದೆ ಎಂದರೆ ಸರಿ. ನಿಡಿ-1 ಛಾಯಚಿತ್ರದಲ್ಲಿರುವ ಮನೆ ಅಸಸ್ ಮೆಂಟ್ 138 ಕ್ಕೆ ಸೇರಿದ ಜಾಗ ಎಂದರೆ ಸರಿಯಲ್ಲ. ನೀವು ಹೂಡಿರುವ ಈ ದಾವೆಯಲ್ಲಿ ದಾವ ಆಸ್ತಿಯಲ್ಲಿ ಮನೆ ಇದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ದಾವೆ ಹೂಡಿದ ಸಮಯದಲ್ಲಿ ಮನೆ ಇರಲಿಲ್ಲ, ಪ್ರಸ್ತುತ ದಾವೆ ನಡೆಯುತ್ತಿರುವ ಸಮಯದಲ್ಲಿ ಪ್ರತಿವಾದಿ ಅದರಲ್ಲಿ ಮನೆ ಕಟ್ಟಿರುತ್ತಾರೆಂದು ನುಡಿದಿರುತ್ತಾರೆ. ನಿಮ್ಮ ವಾದ ಪತ್ರದಲ್ಲಿ ಪ್ರತಿವಾದಿಯು ಅಸಲುದಾವ ಸಂಖ್ಯೆ 74/2014 ನಡೆಯುತ್ತಿರುವಾಗ ಮನೆ ಕಟ್ಟಿರುತ್ತಾರೆಂದು ನಮೂದು ಮಾಡಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**